**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿ:17-08-2024**

**ಪಾಟೀ ಸವಾಲುಃ ದೂರುದಾರರ ಪರ ಶ್ರೀ ಎಂ ಹೆಚ್ ಎಂ ವಕೀಲರಿಂದ**

ನಾನು **10** ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಪಿರ್ಯಾದುದಾರರ ಪರಿಚಯ ಇರುತ್ತದೆ. ನನ್ನ ಮತ್ತು ಅವರ ನಡುವೆ ಒಂದು ಬಾರಿ ಹಣದ ವ್ಯವಹಾರ ಆಗಿರುತ್ತದೆ. ನಾನು ಅವರಿಂದ ನಗದು ರೂಪದಲ್ಲಿ ಈ ಹಿಂದೆ ಹಣ ಪಡೆದಿದ್ದೆ. ನನಗೆ ವಿಜಯಾ ಬ್ಯಾಂಕ್, ದೇವಲಕೆರೆ ಶಾಖೆ ಮತ್ತು ಕಾವೇರಿ ಗ್ರಾಮೀಣ ಬ್ಯಾಂಕ್ ಗಳಲ್ಲಿ ಖಾತೆ ಇರುತ್ತದೆ. ನನ್ನ ಗಂಡನ ಹೆಸರು ದಿನೇಶ್ ಎಂದರೆ ಸರಿ.

ದೂರುದಾರರು ನನಗೆ ನೋಟೀಸ್ ಕಳುಹಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಸಿಕ್ಕಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಖಾಯಂ ವಿಳಾಸ ಬನಾಲು ಗ್ರಾಮ ಎಂದರೆ ಸರಿ. ಸದರಿ ನೋಟೀಸನ್ನು ಸ್ವೀಕರಿಸಿ ನಾನೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದೂರುದಾರರಿಗೆ ಖಾಲಿ ಚೆಕ್ಕನ್ನು **2018** ರಲ್ಲಿ ನೀಡಿದ್ದೆ ಎಂದು ಹೇಳುವ ಸಮಯದಲ್ಲಿ ಯಾವುದಾದರೂ ಬರವಣಿಗೆ ಕರಾರನ್ನು ಮಾಡಿಕೊಳ್ಳಲು ನನಗೆ ತೊಂದರೆ ಇರಲಿಲ್ಲ. ದೂರುದಾರರು ಪದೇ ಪದೇ ಕಿರುಕುಳ ಕೊಡುತ್ತಿದ್ದರು ಎಂದು ಹೇಳಿದ್ದು ಆ ಸಲುವಾಗಿ ದೂರು ಕೊಡಲು ತೊಂದರೆ ಇರಲಿಲ್ಲ. ಹಿಂದಿನ ಸಾಲ ತೀರಿಸುವ ಸಲುವಾಗಿ ನನ್ನ ಖಾತೆಯಿಂದ ಹತ್ತು ಸಾವಿರ ಮತ್ತು ನನ್ನ ಗಂಡನ ಖಾತೆಯಿಂದ ಒಂದು ಲಕ್ಷ ಹಣ ದೂರುದಾರರಿಗೆ ಹೋಗಿರುತ್ತದೆ. ಸದರಿ **1,10,000/-** ಸಾಲವನ್ನು ನಾನೇ ಮಾಡಿದ್ದೆ.

**2021** ರಲ್ಲಿ ದೂರುದಾರರಿಂದ ಬ್ಯಾಂಕ್ ಮೂಲಕ ನಗದು ಮಾಡಿ **4,50,000/-** ರೂ. ಗಳನ್ನು ನಾನು ಸಾಲ ಪಡೆದಿದ್ದರೂ ಅದನ್ನು ಮರೆಮಾಚುವ ಸಲುವಾಗಿ ಹಿಂದಿನ ಸಾಲದ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-**1** ಚೆಕ್ಕು ನನ್ನ ಖಾತೆಗೆ ಸಂಬಂಧಪಟ್ಟ ಚೆಕ್ಕು ಎಂದರೆ ಸರಿ. ನಾನು ಸಾಮಾನ್ಯವಾಗಿ ಬೇರೆಯವರಿಗೆ ಚೆಕ್ಕು ನೀಡುವಾಗ ಬರವಣಿಗೆ ಮಾಡಿ ನೀಡುತ್ತೇನೆ ಎಂದರೆ ಸರಿ, ಸಾಕ್ಷಿ ಮುಂದುವರೆದು ದೂರುದಾರರಿಗೆ ಸಾಲದ ಭದ್ರತೆಗಾಗಿ ಖಾಲಿ ಚೆಕ್ಕನ್ನು ನೀಡಿದ್ದೆ ಎಂದು ನುಡಿಯುತ್ತಾರೆ. ನಿಪಿ-**5** ರಲ್ಲಿ ಇರುವ ಸಹಿ ನನ್ನದಲ್ಲ. ನಿಪಿ-**3** ನೋಟೀಸನ್ನು ನಾನೇ ಖುದ್ದು ನಿಪಿ-**5** ರಂತೆ ಸ್ವೀಕಾರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-**5** ರಲ್ಲಿ ನನ್ನ ಸಹಿ ಇರುವುದಿಲ್ಲ ಎಂದು ಹೇಳಿ ಅಂಚೆ ಇಲಾಖೆ ವಿರುದ್ಧ ದೂರನ್ನು ನೀಡಿರುವುದಿಲ್ಲ. ಸದರಿ ದೂರನ್ನು ನೀಡಲು ತೊಂದರೆ ಇತ್ತಾ ಎಂದರೆ ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಮ್ಮ ಪರ

ವಕೀಲರು ಕೇಸಿನ ಬಗ್ಗೆ ಕೇಳಿದಾಗ ಸದರಿ ನೋಟೀಸ್ ನ ಬಗ್ಗೆ ಗೊತ್ತಾಗಿರುತ್ತದೆ. ಅದಾದ ನಂತರವೂ ನಾನು ಯಾವುದೇ ದೂರು ನೀಡಿರುವುದಿಲ್ಲ ಎಂದರೆ ಸರಿ.

ನಾನು ದೂರುದಾರರಿಗೆ ಖುದ್ದು ನೋಟೀಸನ್ನು ನೀಡಿರುತ್ತೇನೆ. ನಿಡಿ-**1** ರ ಪ್ರಕಾರ ನನ್ನ ಗಂಡನವರು ವಕೀಲರ ಮೂಲಕ ನೋಟೀಸ್ ನೀಡಿರುತ್ತಾರೆ ಎಂದರೆ ಸರಿ, ಅದರಲ್ಲಿ ನನ್ನ ಹೆಸರು ಇರುವುದಿಲ್ಲ ಎಂದರೆ ಸರಿ. ನಾನು ದೂರುದಾರರಿಂದ ನಾಲ್ಕೂವರೆ ಲಕ್ಷ ಸಾಲ ಪಡೆದು ಅದನ್ನು ತಪ್ಪಿಸುವ ಸಲುವಾಗಿ ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಖುದ್ದು ಪಿರ್ಯಾದುದಾರರಿಗೆ ನೋಟೀಸ್ ನೀಡಲು ತೊಂದರೆ ಇರಲಿಲ್ಲ, ಆದರೆ ನನ್ನ ಗಂಡ ಕಳುಹಿಸಿರುತ್ತಾರೆ. ನಾನು ಮತ್ತು ನನ್ನ ಗಂಡ ಶಾಮೀಲಾಗಿ ದುರುದ್ದೇಶದಿಂದ ನಿಡಿ-**1** ರಂತೆ ಸುಳ್ಳು ನೋಟೀಸನ್ನು ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ. ದೂರುದಾರರು ನಿಡಿ-**1** ರ ವಿಚಾರವನ್ನು ಸಹ ಪ್ರಸ್ತಾಪ ಮಾಡಿ ನಿಪಿ-**3** ರಂತೆ ನನಗೆ ನೋಟೀಸ್ ಕಳುಹಿಸಿರುತ್ತಾರೆ ಎಂದರೆ ಅದು ನನಗೆ ತಲುಪಿರುವುದಿಲ್ಲ ಎಂದು ನುಡಿಯುತ್ತಾರೆ.

ಸಾಲ ಮರುಪಾವತಿಗಾಗಿ ನಿಪಿ-**1** ರಂತೆ ಚೆಕ್ಕನ್ನು ಕೊಟ್ಟು ಹಣ ಮರುಪಾವತಿ ತಪ್ಪಿಸುವ ಸಲುವಾಗಿ ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಚೆಕ್ಕನ್ನು ಸಾಲ ಪಡೆದ ನಂತರ ಮರುಪಾವತಿಗಾಗಿ ನೀಡುತ್ತಾರೆ ಎಂದರೆ ಸರಿ. ನಾಲ್ಕೂವರೆ ಲಕ್ಷ ಸಾಲ ಮರುಪಾವತಿಗಾಗಿಯೇ ನಿಪಿ-**1** ಚೆಕ್ಕನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನೋಟೀಸನ್ನು ಸ್ವೀಕರಿಸಿರುವುದಿಲ್ಲ ಎಂದು ತೋರಿಸಲು ಅಂಚೆ ಕಛೇರಿಯವರನ್ನು ನ್ಯಾಯಾಲಯಕ್ಕೆ ಕರೆಸಿ ಸಾಕ್ಷ್ಯ ನುಡಿಸಲು ನನಗೆ ತೊಂದರೆ ಇರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ